# ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
4. **Note:** The lyrics given without highlights are as per Ref. 1. The wordings in Ref. 2 are same as in Ref. 1. The lyrics in Ref. 3 are slightly different and are given separately in yellow highlights and the Singer has followed lyrics as in Ref. 1.

ರಾಗ: ಕಲ್ಯಾಣಿ ತಾಳ: ಅಟ್ಟ

| | |
|---|---|
| ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು | ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು |
| ಕಲ್ಲುಸಕ್ಕರೆ ಕೊಳ್ಳಿರೋ ‖ ಪ ‖ | ಕಲ್ಲುಸಕ್ಕರೆ ಕೊಳ್ಳಿರೋ |
| | |
| ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು | ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು |
| ಪುಲ್ಲಲೋಚನ ಶ್ರೀ ಕೃಷ್ಣನಾಮವೆಂಬ ‖ ಅಪ ‖ | ಪುಲ್ಲನಾಭ ಕೃಷ್ಣನ ದಿವ್ಯ ನಾಮವೆಂಬ |
| | |
| ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ | ಎತ್ತ ಹೇರುವುದಲ್ಲ ಹೊತ್ತು ಮಾರುವುದಲ್ಲ |
| ಒತ್ತೊತ್ತಿ ಗೋಣಿಯೊಳು ತುಂಬುವದಲ್ಲ | ಒತ್ತೊತ್ತಿ ಗೋಣಿಯ ತುಂಬುವದಲ್ಲ |
| ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ | ಎತ್ತ ಹೋದರು ಮತ್ತೆ ಸುಂಕವು ಇದಕಿಲ್ಲ |
| ಉತ್ತಮ ಸರಕಿದು ಅತಿ ಲಾಭ ಬರುವಂಥ ‖ 1 ‖ | ಹತ್ತೆಂಟು ಸಾವಿರಕೆ ಬೆಲೆಯಿಲ್ಲದಂತಹ |
| | |
| ನಷ್ಟ ಬೀಳುವುದಲ್ಲ ನಾತ ಹುಟ್ಟುವುದಲ್ಲ | ನಷ್ಟ ಬೀಳುವುದಲ್ಲ ನಾಶವಾಗುವುದಲ್ಲ |
| ಎಷ್ಟು ಒಯ್ದರು ಬೆಲೆ ರೊಕ್ಕವಿದಕಿಲ್ಲ | ಕಟ್ಟಿ ಇಟ್ಟರೆ ಮತ್ತೆ ಕೆಡುವುದಲ್ಲ |
| ಕಟ್ಟಿರುವೆಯು ತಿಂದು ಕಡಮೆಯಾಗುವುದಲ್ಲ | ಎಷ್ಟು ದಿನವಿಟ್ಟರೂ ಕೆಟ್ಟು ಹೋಗುವುದಲ್ಲ |
| ಪಟ್ಟಣದೊಳಗೆ ಪ್ರಸಿದ್ದವಾಗಿರುವಂಥ ‖ 2 ‖ | ಪಟ್ಟಣದೊಳಗೊಂದು ಲಾಭವೆನಿಸುವಂಥ |
| | |
| ಸಂತೆ ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ | ಸಂತೆಪೇಟೆಗೆ ಹೋಗಿ ಶ್ರಮಪಡಿಸುವುದಲ್ಲ |
| ಸಂತೆಯೊಳಗೆ ಇಟ್ಟು ಮಾರುವುದಲ್ಲ | ಎಂತು ಮಾರಿದರದಕಂತವಿಲ್ಲ |
| ಸಂತತ ಭಕ್ತರ ನಾಲಿಗೆ ಸವಿಗೊಂಬ | ಸಂತತ ಪುರಂದರ ವಿಠಲ ನಾಮವ |
| ಕಾಂತ ಪುರಂದರವಿಠಲ ನಾಮವೆಂಬ ‖ 3 ‖ | ಎಂತು ನೆನೆಯಲು ಪಾಪ ಪರಿಹಾರವಲ್ಲದೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹರಿನಾಮವನ್ನು ಕಲ್ಲುಸಕ್ಕರೆಗೆ ಹೋಲಿಸಿ ಎಲ್ಲರೂ ಇದನ್ನು ಕೊಲ್ಲಿರೆಂದು ದಾಸರು ಸಾರುತ್ತ ಹೊರಟಿದ್ದಾರೆ.

**ಫುಲ್ಲ** = ಹೂವು, ಅರಳು
**ಗೋಣಿ** = ಚೀಲ
**ನಷ್ಟ** = ಹಾನಿ

**Classification:** Mundige
**Ankita:** purandara vittala
**Location:** NA
**Category:** Jeevanoddhara, navaratna malike
**Sub-Category:** kallu, Krishna, divya, sante, papa, huttu, rokka, nalige,
**Pravachana:** Vid. Srinidha Acharya Pyati
**Explanation:** NA